# HSE I - SAMPLE QUESTION PAPER

# SUBJECT - KANNADA (LANGUAGE)

Time : 2.30 Hrs

Cool of time : 15 Mnts

Max. Markls : 80

**ಸೂಚನೆಗಳು**

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡುವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಸಮಯ'ದಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲಿ ಇತರರೊಂದಿಗೆ ಚರ್ಚಿಸುವುದಾಗಲಿ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.

1. ಸೂರ್ಯೋದಯ – ಪದವಿಂಗಡಿಸಿ ಬರೆಯಿರಿ. (1)

2. 'ಮಧುರ' – ಈ ಪದದ ಭಾವನಾಮ ರೂಪವನ್ನು ಬರೆಯಿರಿ. (1)

3. ನಿದ್ದಿ, ಇದ್ಯ – ಇವುಗಳ ಶಿಷ್ಟರೂಪಗಳನ್ನು ಬರೆಯಿರಿ (1)

4. 'ತಲೆಯೋಡು' – ಇಲ್ಲಿನ ಸಂಧಿಯನ್ನು ಹೆಸರಿಸಿರಿ. (1)

5. ಈ ಕೆಳಗಿನವುಗಳಲ್ಲಿ ಡಿ.ವಿ.ಜಿ.ಯವರ ಕೃತಿ ಯಾವುದು? (1)

   (ಇಂಗ್ಲೀಷ್ ಗೀತಗಳು, ಪಕ್ಷಿಕಾಶಿ, ಉಮರನ ಒಸಗೆ, ಮುಖಾಬಿಲೆ)

6. 'ಕಣ್ಣೀರಲ್ಲಿ ಕೈತೊಳೆ' – ಈ ನುಡಿಗಟ್ಟನ್ನು ಬಳಸಿಕೊಂಡು ವಾಕ್ಯವೊಂದನ್ನು ರಚಿಸಿರಿ. (1)

7. 'ಜನರು ಬುದ್ಧಿವಂತರಾಗ್ತಿರೋ ಲಕ್ಷಣ ಕಾಣಿಸ್ತಿದೆ' ಈ ಮಾತನ್ನು ಹೇಳಿದವರು ಯಾರು? (1)

   (ಬಕ, ರಾಜ, ನಗರಪಾಲಕ, ಸೂತ್ರಧಾರ)

8. 'ರಂಗವೇದಿಕೆಯ ಒಳಗೂ ಹೊರಗೂ ಶೇಣಿಯವರು ದಣಿವಿಲ್ಲದ ಮಾತುಗಾರ' – ಈ ವಾಕ್ಯದಲ್ಲಿ ಬಂದಿರುವ ತದ್ಧಿತ ನಾಮವನ್ನು ಗುರುತಿಸಿ ಬರೆಯಿರಿ. (1)

9. ರಜ – ಈ ಪದದ ಅರ್ಥವನ್ನು ಬರೆಯಿರಿ. (1)

10. ಆಯ್ದಕ್ಕಿ ಲಕ್ಕಮ್ಮನ ವಚನಗಳಲ್ಲಿ ಕಂಡುಬರುವ ಅಂಕಿತ ಯಾವುದು? (1)

11. 'ಬೇಲಿ ಮತ್ತು ಹೊಲ' – ಇದು ಯಾರ ಕೃತಿ (1)

(ಕುಂ. ವೀರಭದ್ರಪ್ಪ, ರಹಮತ್ ತರೀಕೆರೆ, ಭುವನೇಶ್ವರಿ ಹೆಗಡೆ, ಫಕೀರ್ ಮುಹಮ್ಮದ್ ಕಟ್ಪಾಡಿ)

12. 'ಬಳಾರಿಯ ಮನೆಯಂ ಪಱಿಕೆಯ ಕುಱಿಯಂ ಪುಗಿಸುವಂತೆ' – ಇಲ್ಲಿ ಬಂದಿರುವ ಅಲಂಕಾರ ಯಾವುದು. (1)

(ಉಪಮ, ರೂಪಕ, ದೀಪಕ, ಶ್ಲೇಷೆ)

13. ಪಾಠಭಾಗದಲ್ಲಿ ಬಂದಿರುವ ತ್ರಿಪದಿಗಳನ್ನು ಆಧಾರವಾಗಿರಿಸಿಕೊಂಡು 'ತಾಯಿ – ತವರು' ಇವುಗಳ ಕುರಿತಾದ ಜನಪದರ ಭಾವನೆಗಳನ್ನು ವಿಶದಪಡಿಸಿರಿ. (3)

14. ಕೆಳಗೆ ಕೊಡಲಾದ ಆತ್ಮಕಥೆಯ ಭಾಗವನ್ನು ಜೀವನಚರಿತ್ರೆಯಾಗಿ ರೂಪಾಂತರಿಸಿ ಬರೆಯಿರಿ. (3)

ತಂದೆ, ತಾಯಿ ಇಬ್ಬರೂ ಕೆಲಸಕ್ಕೆ ಹೋದಾಗ ನಾನೊಬ್ಬನೇ ನಮ್ಮ ಮನೆ ಕಾಯುತ್ತಿದ್ದೆ. ಸಂಜೆಯಾದ ಕೂಡಲೇ ನಮ್ಮ ಮನೆಯ ಕೋಳಿಗಳನ್ನು ಹುಡುಕಿ ಕವುಚುತ್ತಿದ್ದೆ. ಪುಟ್ಟದಾದ ಸೀಮೆ ಎಣ್ಣೆ ಬುಡ್ಡಿ ಹಚ್ಚಿ ಬಿಡುತ್ತಿದ್ದೆ. ತಂದೆ ತಾಯಿ ಬಂದವರೆ ಅಡುಗೆಗೆ ಸಿದ್ಧತೆ ಮಾಡಿತ್ತಿದ್ದರು. ಕೆಲವು ದಿನ ಗೆಣಸನ್ನು ಬೇಯಿಸಿ ತಿನ್ನುತ್ತಿದ್ದೆವು. ಕೆಲವು ದಿನ ಕಡಲೆಪುರಿಯನ್ನು ತಿಂದು ನೀರು ಕುಡಿದು ಮಲಗುತ್ತಿದ್ದೆವು. ಚೂರು ಹೊಲದಲ್ಲಿ ಬೆಳೆದದ್ದು ನನ್ನ ತಂದೆಯ ಮೇಲಿದ್ದ ಸಾಲದ ಬಡ್ಡಿಗೆ ಸಾಕಾಗುತ್ತಿತ್ತು. ಕೂಲಿಯ ಹಣ ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ನನ್ನ ತಾಯಿ ಸಾವನ ದುರ್ಗಕ್ಕೆ ಕಾಡಿನ ಸೌದೆ ತರಲು ಹೋಗುತ್ತಿದ್ದಳು. ಸಂತೆಯಲ್ಲಿ ಆ ಸೌದೆಹೊರೆ ಮಾರಾಟವಾಗುತ್ತಿತ್ತು. ಮನೆಗೆ ಬಂದು ಹೊರೆಯೊಳಗೆ ತುಂಬಿಸಿದ್ದ ಕಬ್ಬಿನ ಜಲ್ಲೆಯನ್ನು ತೆಗೆದು ನನಗೆ ಕೊಡುತ್ತಿದ್ದಳು.

15. 'ತೆಯ್ಯಂ' ಆರಾಧನೆಯಲ್ಲಿ ತೋತ್ತಂಪಾಟ್ಟು'ಗಳ ವಿಶೇಷತೆಯನ್ನು ಬರೆಯಿರಿ. (3)

16. ಕೆಳಗೆ ಕೊಟ್ಟಿರುವ ಪದ್ಯದ ಭಾವಾರ್ಥವನ್ನು ಬರೆಯಿರಿ (3)

ಉಪ್ಪಿಷ್ಟು ಹುಳಿಯಿಷ್ಟು ಕಾರ ಸಿಹಿಯಷ್ಟಿಷ್ಟು

ಒಪ್ಪಿರ್ದೊಡದು ಭೋಜ್ಯವಂತು ಜೀವಿತಮುಂ

ತಪ್ಪು ಸರಿ ಬೆಪ್ಪು ಜಾಣಂದಕುಂದುಗಳ ಬಗೆ

ಯಿಪ್ಪತ್ತು ಸೇರೆ ರುಚಿ ಮಂಕುತಿಮ್ಮ

17. "ನಿಮ್ಮಪ್ಪ ಸಾಲಕ್ಕೆ ನಿನ್ನ ಸಂಬ್ಳ ಇಟ್ಯಾನ" ಗೌಡರ ಈ ಮಾತಿಗೆ ಬಸವನ ಪ್ರತಿಕ್ರಿಯೆ ಏನಾಗಿತ್ತು. (3)

18. ವೈಚಾರಿಕ ಪ್ರಬಂಧ ಮತ್ತು ನಗೆಲೇಖನ ಇವುಗಳ ನಡುವಿನ ವ್ಯತ್ಯಾಸವನ್ನು ಟಿಪ್ಪಣಿಯಾಗಿ ಬರೆಯಿರಿ. (4)

19. ಅಂಡಮಾನಿನ ಕಡಲ ಜೀವಿಗಳ ವರ್ಣವೈವಿಧ್ಯ 'ಕಡಲ ಒಡಲು' ಕಥನ ಭಾಗದಲ್ಲಿ ನಿರೂಪಿತವಾದ ಬಗೆಯನ್ನು ವರ್ಣಿಸಿರಿ. (4)

20. 'ಸುಗ್ಗಿ ಬರುತಿದೆ' ಕವಿತೆಯ ಭಾಗವೊಂದನ್ನು ಕೆಳಗೆ ಕೊಡಲಾಗಿದೆ. ಭಾಷೆ, ಶೈಲಿ, ಪ್ರಾಸ ವಿಶೇಷತೆಗಳನ್ನು ಪರಿಗಣಿಸಿಕೊಂಡು ವಿಮರ್ಶಾತ್ಮಕ ಟಿಪ್ಪಣಿಯನ್ನು ಬರೆಯಿರಿ. (4)

ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ,
ಮತ್ತ ಮಧು ಮಾಸವಿದು ಬನ್ನಿರೆಂದು ಸಾರುತ
ಜಾರುತಿಹುದು ಮಾಗಿ ಚಳಿ
ಕುಸುಮಿಸಿರುವ ಲತೆಗಳಲಿ
ಮೊರೆಯುತಿಹವು ಸೊಕ್ಕಿದಳಿ
ಮುಕ್ತಜೀವರಂದದಿ
ಉಲಿಯೆ ಪಿಕ, ಗಳವೆ ಶುಕ, ಸುಗ್ಗಿ ಬಂದಿತಂದದಿ

ಮಾಮರಂಗಳಲಿ ವಿಹಂಗತತಿಯ ನಿಸ್ವನಂಗಳಿಂ,
ತಳಿರ ಸೊಂಪನಲರ ಜೊಂಪನಾಂತ ಬನಬನಂಗಳಿಂ,
ನಲಿವ ಪಚ್ಚೆಯುಡೆಯನುಟ್ಟು,
ಅರಳಿದರಳುಗಳನು ತೊಟ್ಟು,
ಹಿಮದ ಮಣಿಯ ಮಾಲೆಯಿಟ್ಟು
ತಣಿದು ಸೋಲೆ ಕಣ್ಮನಂ
ಕರೆವಳೋವಿಬನದ ದೇವಿತನ್ನ ಸುಗ್ಗಿಯಾಣ್ಮನಂ

21. 'ಮನುಷ್ಯ ಎಷ್ಟೇ ಬಲಿಷ್ಠನಾಗಿ ಬೆಳೆದರೂ ನಿಸರ್ಗದೆದುರು ನಿಲ್ಲಲಾರ' ಎಂಬುದನ್ನು 'ಸುನಾಮಿಯ ಹಾಡು' ಕವಿತೆಯ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ. (4)

22. ಕೊಳವೆ ಬಾವಿಯ ಅತಿಯಾದ ನಿರ್ಮಾಣದಿಂದ ಭೂಮಿಯ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ. ಈ ಕುರಿತು ಜನಜಾಗೃತಿ ಮೂಡಿಸುವ ಸಲುವಾಗಿ ಕರಪತ್ರವೊಂದನ್ನು ತಯಾರಿಸಿರಿ. (4)

23. 'ಮನೆ ಮನಸ್ಸು' ಇವುಗಳ ಕುರಿತಾಗಿರುವ ಬಸವಣ್ಣನವರ ಚಿಂತನೆಗಳನ್ನು ನೀವು ಓದಿದ ವಚನದ ಆಧಾರದಲ್ಲಿ ಸಂಗ್ರಹಿಸಿ ಟಿಪ್ಪಣಿ ಬರೆಯಿರಿ. (4)

24. 'ವಟವೃಕ್ಷಮೇ ಸಾಕ್ಷಿ' – ಈ ಶೀರ್ಷಿಕೆಯ ಔಚಿತ್ಯವನ್ನು ಬರೆಯಿರಿ. (4)

25. ಕೆಳಗೆ ಪದ್ಯಭಾಗವೊಂದನ್ನು ಕೊಡಲಾಗಿದೆ. ಅದಕ್ಕೆ ಪ್ರಸ್ತಾರ ಹಾಕಿ, ಗಣ ವಿಭಜನೆ ಮಾಡಿ, ಛಂದಸ್ಸಿನ ಲಕ್ಷಣವನ್ನು ಬರೆಯಿರಿ. (5)

ಅಣ್ಣನ ಮಾತಂ ಮನದೊಳ್
ತಿಣ್ಣಂ ತಳೆದೆಂದಳನುಜೆ ಮಾಡಿದುದಂ ನಾ
ವುಣ್ಣದೆ ಪೋಕುಮೆ ಭಯಮೇ
ಕಣ್ಣ ಭವಪ್ರಕೃತಿ ವಿಕೃತಿ ನಾವಜೆಯದುದೇ

26. ಅನುವಾದ ಒಂದು ಕಲೆ. ಕೆಳಗೆ ನೀಡಲಾದ ಇಂಗ್ಲೀಷ್ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ. (6)

**National Boxing championship**

**Bangalore : The 10th National men's boxing championship will be held here at the Kanteerava stadium from December 26 to 30. More tha 300 boxers, including many internationals representing the 29 States and 6 Union territories, BSF and Indian Railways will participate in the championship.**

27. 'ಬಕ' ನಾಟಕವು ಪುರಾಣದ ಚೌಕಟ್ಟಿನಲ್ಲಿ ಮೂಡಿಬಂದ ವರ್ತಮಾನ ಸಮಾಜದ ಸ್ಥಿತಿಗತಿಗಳ ಪ್ರತಿಫಲನವಾಗಿದೆ. ಈ ಮಾತನ್ನು ಸಮರ್ಥಿಸಿ ಬರೆಯಿರಿ. (ಉತ್ತರ ಒಂದು ಪುಟಕ್ಕೆ ಮೀರದಂತಿರಲಿ) (6)

28. 'ನಿನ್ನಯ ವೀರರ್ರೈವರ ನೋಯಿಸೆನು' ಕಾವ್ಯಭಾಗದಲ್ಲಿ ಬಂದಿರುವ ಕೃಷ್ಣ – ಕರ್ಣರ ಸಂಭಾಷಣೆಯನ್ನು ಗದ್ಯರೂಪದಲ್ಲಿ ಬರೆಯಿರಿ. (ಉತ್ತರ ಒಂದುವರೆ ಪುಟಕ್ಕೆ ಮೀರದಂತಿರಲಿ) (8)

# Sample Question paper – (Kannada Language)

## 6.Answer Key/Value Points

| Q.No | Answer Key/Value Points | score | Toatal |
|---|---|---|---|
| 1 | ಸೂರ್ಯ + ಉದಯ | **1** | **1** |
| 2 | ಮಾಧುರ್ಯ | **1** | **1** |
| 3 | ನಿದ್ದೆ, ವಿದ್ಯೆ | **1** | **1** |
| 4 | ಯಕಾರಾಗಮ ಸಂಧಿ | **1** | **1** |
| 5 | ಉಮರನ ಒಸಗೆ | **1** | **1** |
| 6 | ಅರ್ಥಪೂರ್ಣ ವಾಕ್ಯ ರಚನೆಗೆ | **1** | **1** |
| 7 | ಬಕ | **1** | **1** |
| 8 | ಮಾತುಗಾರ | **1** | **1** |
| 9 | ಧೂಳು | **1** | **1** |
| 10 | ಅಮಲೇಶ್ವರ ಲಿಂಗ | **1** | **1** |
| 11 | ಕುಂ. ವೀರಭದ್ರಪ್ಪ | **1** | **1** |
| 12 | ಉಪಮ | **1** | **1** |
| 13 | ಹಾಲುಂಡ ತವರಿಗೆ . . ., ಹಣ್ಣು ಹಾಲಿಗಿಂತ. . ., ತಂದೀಯ ನೆನೆದರೆ ಈ ತ್ರಿಪದಿಗಳ ಆಶಯ ಉಕ್ತವಾಗಿದ್ದರೆ | 3 | **3** |
| 14 | ತಂದೆ, ತಾಯಿ ಇಬ್ಬರೂ ಕೆಲಸಕ್ಕೆ ಹೋಗುತ್ತಿದ್ದರು. ಆಗ ಅವರೊಬ್ಬರೇ ಮನೆ ಕಾಯುತ್ತಿದ್ದರು. ಸಂಜೆಯಾದ ಕೂಡಲೇ ನಮ್ಮ ಮನೆಯ ಕೋಳಿಗಳನ್ನು ಹುಡುಕಿ ಕವುಚುತ್ತಿದ್ದರು. ಪುಟ್ಟದಾದ ಸೀಮೆ ಎಣ್ಣೆ ಬುಡ್ಡಿ ಹಚ್ಚಿ ಬಿಡುತ್ತಿದ್ದರು. ತಂದೆ ತಾಯಿ ಬಂದವರೆ ಅಡುಗೆಗೆ ಸಿದ್ಧತೆ ಮಾಡಿತ್ತಿದ್ದರು. ಕೆಲವು ದಿನ ಗೆಣಸನ್ನು ಬೇಯಿಸಿ ಅವರೆಲ್ಲರು ತಿನ್ನುತ್ತಿದ್ದರು. . . . . . ಈ ರೀತಿಯಲ್ಲಿ ಸೂಕ್ತ ಬದಲಾವಣೆಯೊಂದಿಗೆ ರೂಪಾಂತರಿಸಿದ್ದರೆ. | 3 | **3** |
| 15 | ತೋತ್ತಂ ಪಾಟುಗಳ ವಶೇಷತೆಗಳನ್ನು ಗುರುತಿಸಿದ್ದರೆ. | 3 | **3** |
| 16 | ಉಪ್ಪು, ಹುಳಿ, ಖಾರ ಒಂದು ನಿರ್ದಿಷ್ಟ ಅನುಪಾತದಲ್ಲಿ ಸೇರಿದ್ದರೆ ಹೇಗೆ ರುಚಿಸುವುದೋ ಅದೇ ರೀತಿ ನೋವು – ನಲಿವು, ಕಷ್ಟ – ಸುಖ ಇವುಗಳು ಸೇರಿರಲು ಸುಖ ಎಂಬ ಭಾವ ಉಕ್ತವಾಗಿದ್ದರೆ | 3 | **3** |
| 17 | ಗೌಡರ ಮಾತನ್ನು ಕೇಳಿ ಬಸವ ತಬ್ಬಿಬ್ಬಾದನು. ಆತಂಕದಿಂದಲೇ ಅಲ್ಲಿಂದ ಜಾರಿಕೊಳ್ಳಲು ಹವಣಿಸಿದನು. 'ನಿಮ್ಮನಿಯಾಗ ಸಂಬ್ಳಾಕ ಇರಾದಿಲ್ಲ. ನಮ್ಮಪ್ಪನ ಜೊತೆ ಊರಿಗ್ಹೋಕ್ತೀನಿ' ಎಂದು ಕೂಗುತ್ತಾ ಓಡಿದನು | 3 | **3** |
| 18 | ವೈಚಾರಿಕ ಪ್ರಬಂಧ ಮತ್ತು ನಗೆ ಬರಹಗಳ ನಡುವಿನ ನಾಲ್ಕು ಸಾಮಾನ್ಯ ವ್ಯತ್ಯಾಸಗಳನ್ನು ಗುರುತಿಸಿದ್ದರೆ. | 2+2 | **4** |
| 19 | ಅಂಡಮಾನಿನ ಕಡಲ ಒಡಲಾಳದ ಮತ್ಸ್ಯ ಪ್ರಬೇಧಗಳು – ಅವುಗಳ ವರ್ಣ ವೈವಿಧ್ಯ, ಜೀವನ ರೀತಿ ಇವುಗಳನ್ನು ಸ್ಥೂಲವಾಗಿ ಸೂಚಿಸಿದ್ದರೆ<br>ನಿರೂಪಣಾ ವಿಧಾನೆ | 3<br>1 | **4** |
| 20 | ಪ್ರಾಸ ವಿಶೇಷತೆಗಳನ್ನು ಗುರುತಿಸಿಕೊಂಡು ನಿರೂಪಣೆಯ ಶೈಲಿ, ಭಾಷೆ, ಕವಿತಾ ಸೌದರ್ಯ – ಇವುಗಳನ್ನು ವ್ಯಾಖ್ಯಾನಿಸಿದ್ದರೆ<br>ವಿಮರ್ಶಾತ್ಮಕ ಬರವಣಿಗೆಯ ಶೈಲಿ | 3<br>1 | **4** |
| 21 | 'ಸುನಾಮಿಯ ಹಾಡು' ಕವಿತೆಯ ಆಶಯವನ್ನು ಬರೆದಿದ್ದರೆ<br>ಮಾತಿನ ತಾತ್ಪರ್ಯವನ್ನು ವಿವೇಚಿಸಿದ್ದರೆ | 2<br>2 | **4** |
| 22 | ಕರಪತ್ರದ ರೂಪ ವಿನ್ಯಾಸ<br>ವಿಷಯದ ಸಮಗ್ರತೆ | 2<br>2 | **4** |

# Sample Question paper – (Kannada Language)

## 6.Answer Key/Value Points

| | | | |
|---|---|---|---|
| 23 | ಬಸವಣ್ಣನವರ ವಚನಗಳಲ್ಲಿ ಉಕ್ತವಾಗಿರುವಂತೆ ಮನೆ – ಮನಸ್ಸುಗಳ ವಿಚಾರವನ್ನು ತಾರ್ಕಿಕವಾಗಿ ಪ್ರತಿಪಾದಿಸಿದ್ದರೆ<br>ನಿರೂಪಣ ವಿಧಾನ | 3<br>1 | **4** |
| 24 | ವಟವೃಕ್ಷಮೇ ಸಾಕ್ಷಿ – ಕ್ಥೆಯ ಸಾರ – ವಟವೃಕ್ಷವು ಸಾಕ್ಷಿಯಾಗಿ ನಿಲ್ಲುವ ಅಪರೂಪದ ಸನ್ನಿವೇಷ ಮೊದಲಾದವುಗಳನ್ನು ಪ್ರಸ್ತಾಪಿಸಿದ್ದರೆ<br>ಶೀರ್ಷಿಕೆಯ ಔಚಿತ್ಯವನ್ನು ತಿಳಿಸಿದ್ದರೆ | 3<br>1 | **4** |
| 25 | ಪ್ರಸ್ತಾರ ಹಾಕಿದ್ದರೆ<br>ಗಣ ವಿಭಾಗ ಮಾಡಿದ್ದರೆ<br>ಛಂದಸ್ಸನ್ನು ಹೆಸರಿಸಿ ಲಕ್ಷಣಗಳನ್ನು ತಿಳಿಸಿದ್ದರೆ | 2<br>1<br>2 | **5** |
| 26 | ಅರ್ಥಪೂರ್ಣ ಭಾಷಾಂತರಕ್ಕೆ | 6 | **6** |
| 27 | ಬಕ ನಾಟಕ ಪುರಾಣದ ಕಥೆಯಾದರೂ ವಾಸ್ತವ ಸಮಾಜದ ಸಮಸ್ಯೆಗಳ ದರ್ಶನ – ಭ್ರಷ್ಟಾಚಾರದ ಸ್ವರೂಪ – ಆಧಿಕಾರಿಗಳ ಲಾಲಸೆ – ಅಸಹಾಯಕ ಜನರು ಮೊದಲಾದವುಗಳನ್ನು ಪ್ರಸ್ತಾಪಿಸಿದ್ದರೆ<br>ನಿರೂಪಣಾ ವಿಧಾನ | 5<br>1 | **6** |
| 28 | ಕಾವ್ಯಭಾಗದ ಸಂದರ್ಭವನ್ನು ತಿಳಿಸಿದ್ದರೆ<br>ಕೃಷ್ಣ ಕರ್ಣರ ಸಂಭಾಷಣೆಯನ್ನು ಗದ್ಯ ರೂಪದಲ್ಲಿ ಬರೆದಿದ್ದರೆ<br>ಆಶಯ ಸಮಗ್ರತೆ | 2<br>4<br>2 | **8** |
| | | Total | **80** |

# HSE I - SAMPLE QUESTION PAPER
# SUBJECT - KANNADA (LANGUAGE)

Time : 2.30 Hrs

Cool of Time : 15 Mnts

Max. Markls : 80

**ಸೂಚನೆಗಳು**

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡುವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಸಮಯ'ದಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲಿ ಇತರರೊಂದಿಗೆ ಚರ್ಚಿಸುವುದಾಗಲಿ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.

1. 'ಕಡಲ ಒಡಲು' ಗದ್ಯಭಾಗ ಯಾವ ಪ್ರಕಾರಕ್ಕೆ ಸೇರಿದೆ. **(1)**

   (ನಾಟಕ, ಕಾದಂಬರಿ, ಪ್ರವಾಸ ಕಥನ, ವಿಮರ್ಶೆ)

2. 'ಶೃಂಗಾರ' – ಈ ಪದದ ತದ್ಭವ ರೂಪವನ್ನು ಆಯ್ದು ಬರೆಯಿರಿ. **(1)**

   (ಶೃಂಖಲೆ, ಸಿಂಗರ, ಹಿಮಗಾರ, ಶೃಂಗರ)

3. ಈ ಕೆಳಗಿನ ಸಾಲುಗಳಲ್ಲಿ ಆಯ್ದಕ್ಕಿ ಲಕ್ಕಮ್ಮನ ವಚನಗಳಲ್ಲಿ ಕಂಡುಬರುವ ಅಂಕಿತ ಯಾವುದು? **(1)**

   (ಕೂಡಲಸಂಗಮದೇವ, ಅಮುಗೇಶ್ವರ, ಚೆನ್ನಮಲ್ಲಿಕಾರ್ಜುನ, ಅಮಲೇಶ್ವರಲಿಂಗ)

4. ಈ ಕೆಳಗಿನವುಗಳಲ್ಲಿ ಅನ್ಯದೇಶೀಯ ಪದ ಯಾವುದು? **(1)**

   (ನೀರು, ತಲೆ, ನೋಟೀಸು, ಶಿಖರ)

5. 'ರಸಾನುಭವ' – ಈ ಪದವನ್ನು ವಿಂಗಡಿಸಿ ಬರೆಯಿರಿ. **(1)**

6. 'ತರುಣವನಹರಿಣಯುಗಮಂ ತರಕ್ಷು ಪಿಡಿವಂತೆ ಚಂಡಕರ್ಮಂ ಪಿಡಿದಂ' – ಇಲ್ಲಿ ಕಂಡುಬರುವ ಅಲಂಕಾರ ಯಾವುದು? **(1)**

7. 'ಅನೃತ' – ಈ ಪದದ ಅರ್ಥವನ್ನು ಬರೆಯಿರಿ. **(1)**

8. ಚಿತ್ರಕಲೆಯಲ್ಲಿ ಪ್ರವೀಣನಾದ ಕಲಾವಿದನು ಸುಂದರವಾದ ರಚನೆಗಳನ್ನು ಸೃಷ್ಟಿಸಿದನು. **(1)**

   ಅಡಿಗೆರೆ ಎಳೆದ ಪದದ ಭಾವನಾಮ ರೂಪವನ್ನು ಬರೆಯಿರಿ.

ಸರಿಹೊಂದಿಸಿ ಬರೆಯಿರಿ.

9. ಜನ್ನ – ಚಂಪು – ನೆರೆಮನೆಯ ದು:ಖಕ್ಕೆ ಅಳುವವರ ಮೆಚ್ಚ (1)

10. ಬಸವಣ್ಣ – ಷಟ್ಪದಿ – ತಸ್ಕರಸ್ಯಾನೃತಬಲಂ (1)

11. ಕುಮಾರವ್ಯಾಸ – ವಚನ – ಧೀರರಕಟಕುಮಾರರ್ (1)

12. ದುರ್ಗಸಿಂಹ – ಕಂದ – ಭೇದದಲಿ ಹೊಕ್ಕಿರಿದನೋ (1)

13. ಮೊಮ್ಮಗಳು ತಂದ ತಲೆಯೋಡನ್ನು ನೋಡಿದಾಗ ಅಜ್ಜನ ಪ್ರತಿಕ್ರಿಯೆ 'ಬ್ಲೆನ್‌ಹೀಮ್‌ಕದನ' ಕಥನ ಕವನದಲ್ಲಿ ಹೇಗೆ ವ್ಯಕ್ತವಾಗಿದೆ? (2)

14. ಕೆಳಗಿನ ಜನಪದ ತ್ರಿಪದಿಯ ಆಶಯವನ್ನು ಬರೆಯಿರಿ. (2)

ಜೂಜಾಡಿ ಪಾಂಡವರು ರಾಜ್ಯವ ಸೋತರು

ಜೂಜಾಡಿ ನಳನು ಬಳಲಿದ – ಕಂದಯ್ಯ

ಜೂಜಿಗೆ ಮನವ ಬಿಡದಿರು

15. ಈ ಕೆಳಗಿನ ಮಾತನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿರಿ. (2)

'ಬಸ್ವ ಈ ಹೊತ್ತು ನಾವೆಲ್ಲಾ ಊರಿಗ್ಹೋಕ್ತೀವಿ..... ನೀನೊಬ್ನೆ ಗೌಡ್ರ ಮನ್ಯಾಗಿರು,...... ಅವ್ರೀಗೆ ಹೇಳ್ತೀನಿ'.

16. ಈ ಕೆಳಗಿನ ವಾಕ್ಯವನ್ನು ಸರಳವಾಕ್ಯಗಳಾಗಿ ಬರೆಯಿರಿ. (2)

ಬೆಕ್ಕೊಂದು ಬಂದು ಬೆಣ್ಣೆಯನ್ನು ತಿನ್ನುತ್ತಿದ್ದುದನ್ನು ನಾವಿಬ್ಬರು ಕಂಡ ವಿಚಾರವನ್ನು ಎಷ್ಟೇ ವರ್ಣಿಸಿ ಹೇಳಿದರೂ ಯಾರ ಕಿವಿಯ ಮೇಲೂ ಅದು ಬೀಳದೆ ನಮಗೆ ಆಗಬೇಕಾದ ಶಾಸ್ತಿ ಆಗಿಯೇ ಆಯಿತು.

17. 'ಪ್ರಕೃತಿ ಶೋಷಣೆ ಜೀವಸಂಕುಲಕ್ಕೆ ಹಾನಿ' ಎಂಬುದು 'ಒಸರು' ಕಥೆಯಲ್ಲಿ ಪ್ರತಿಪಾದಿತವಾದ ಬಗೆಯನ್ನು ವಿಶದಪಡಿಸಿರಿ. (3)

18. ಸುಗ್ಗಿಯಾಗಮನದಿಂದ ಪ್ರಕೃತಿಯಲ್ಲಾದ ಬದಲಾವಣೆಗಳನ್ನು ಕವಿ ವರ್ಣಿಸಿದ ಬಗೆಯನ್ನು ತಿಳಿಸಿರಿ. (3)

19. ಕೆಳಗಿನ ಪದ್ಯದ ಭಾವಾರ್ಥವನ್ನು ಬರೆಯಿರಿ. (3)

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು

ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ

ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ

ಎಲ್ಲರೊಳಗೊಂದಾಗು ಮಂಕುತಿಮ್ಮ

20. ಹಸಿವೆಯ ಘೋರ ಚಿತ್ರಣ ಹುಗ್ಗಿ ಕಥೆಯಲ್ಲಿ ಮೂಡಿಬಂದ ಬಗೆಯನ್ನು ವ್ಯಾಖ್ಯಾನಿಸಿರಿ. (3)

21. ಧರ್ಮಬುದ್ಧಿ, ದುಷ್ಟಬುದ್ಧಿ ಪಾತ್ರಗಳ ಗುಣಸ್ವಭಾವಗಳನ್ನು ತೌಲನಿಕವಾಗಿ ವಿವೇಚಿಸಿ ಟಿಪ್ಪಣಿಯೊಂದನ್ನು ಬರೆಯಿರಿ (3)

22. ಶೇಣಿಯವರಿಗೆ 'ಅಪ್ರತಿಮ ಪ್ರತಿನಾಯಕ' ಎಂಬ ಬಿರುದು ಹೇಗೆ ಅನ್ವಯವಾಗುತ್ತದೆ? ಸ್ಪಷ್ಟಪಡಿಸಿರಿ. (3)

23. ಈ ಕೆಳಗಿನ ಪದ್ಯದ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ. (4)

ಸಹ್ಯಾದ್ರಿಯ ಗಿರಿಪಂಕ್ತಿಯ
ಕೊನೆಗಾಣದ ಲೀಲೆ,
ಬಹುಯೋಜನ ವಿಸ್ತೀರ್ಣದ
ವನರಾಜಿಯ ಮಾಲೆ
    ಬಾಂದಳದಿಂದಿಳಿಯುತ್ತಿರೆ
    ಬೆಳ್ದಿಂಗಳ ಗಂಗೆ
    ಹೊಳೆಯುತ್ತಿದೆ ಬರೆದಂದದಿ
    ದೂರದಿ ನದಿ ತುಂಗೆ !
ಅ: ಆಲಿಸು ಆಕಾಶದ
ತೇನೆಯ ಸುರವಾಣಿ;
ಜುಂಮ್ಮೆಂದಿದೆ ಅದನಾಲಿಸಿ
ಸಹ್ಯಾದ್ರಿಯ ಶ್ರೇಣಿ

24. ಭೂತ ಮತ್ತು ತೆಯ್ಯಂ ಆರಾಧನೆಯ ವಿಧಾನಗಳಲ್ಲಿ ಕಂಡುಬರುವ ಯಾವುದಾದರೂ ಎರಡು ಸಾಮ್ಯ ವ್ಯತ್ಯಾಸಗಳನ್ನು ತಿಳಿಸಿರಿ. (4)

25. 'ಕೋಪದಿಂದ ವ್ಯಕ್ತಿ ತನ್ನ ಹಾಗೂ ಇತರರ ನಾಶಕ್ಕೆ ಕಾರಣನಾಗುತ್ತಾನೆ'. ನೀವು ಓದಿದ ವಚನವನ್ನು ಹಿನ್ನೆಲೆಯಾಗಿಸಿಕೊಂಡು ಈ ಕುರಿತು ಲಿಖಿತ ಭಾಷಣವೊಂದನ್ನು ತಯಾರಿಸಿರಿ. (4)

26. ನೆರೆ ಸಂತ್ರಸ್ತರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡುವಂತೆ ಕೋರಿ ಜಿಲ್ಲಾಧಿಕಾರಿಯವರಿಗೆ ಸಮರ್ಪಿಸಲು ಮನವಿಪತ್ರವೊಂದನ್ನು ತಯಾರಿಸಿರಿ. (4)

27. ಪ್ರೇಕ್ಷಣೀಯ ಸ್ಥಳಗಳಿಗೆ ನೀವು ಕೈಗೊಂಡ ಪ್ರವಾಸದ ಅನುಭವಗಳನ್ನು ವರ್ಣಿಸಿ ಗೆಳೆಯನಿಗೆ ಪತ್ರವೊಂದನ್ನು ಬರೆಯಿರಿ. (4)

28. 'ನಿನ್ನಯ ವೀರರೈವರ ನೋಯಿಸೆನು' ಕಾವ್ಯಭಾಗದಲ್ಲಿ ಕರ್ಣನು ಉಭಯಸಂಕಟಕ್ಕೊಳಗಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ. (ಉತ್ತರ ಒಂದು ಪುಟಕ್ಕೆ ಮೀರದಂತಿರಲಿ) (6)

29. ಅಭಯರುಚಿ ಅಭಯಮತಿಯರನ್ನು ಕಂಡು ‘ಇವರ ನೆಗಟ್ಟ್ತೆ ಕರಂ ಪಿರಿದು ಧೀರರಕಟ ಕುಮಾರರ್’ ಎಂದು ಮಾರಿದತ್ತನು ನುಡಿಯಲು ಕಾರಣವಾದ ಸನ್ನಿವೇಶವನ್ನು ವಿವರಿಸಿ ಬರೆಯಿರಿ. (ಉತ್ತರ ಒಂದು ಪುಟಕ್ಕೆ ಮೀರದಂತಿರಲಿ) (8)

ಅಥವಾ

ಮಾರಿದತ್ತನು ಅಭಯರುಚಿ ಅಭಯಮತಿಯರನ್ನು ಕಂಡು ‘ಮುನ್ನಮಿನ್ನರಂ ಕಂಡರಿಯೆನ್’ ಎಂದು ಭಾವುಕನಾಗಿ ನುಡಿಯಾಲು ಕಾರಣವಾದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

30. ಭ್ರಷ್ಟಾಚಾರದ ಸ್ವರೂಪವನ್ನು ಬಕ ನಾಟಕದಲ್ಲಿ ಕಾಣಬಹುದು. ತರಗತಿಯಲ್ಲಿ ನಡೆಯಲಿರುವ ವಿಚಾರಸಂಕಿರಣದಲ್ಲಿ ಮಂಡಿಸಲು ‘ಭ್ರಷ್ಟಾಚಾರ ಮುಕ್ತ ಭಾರತ’ ಎಂಬ ವಿಷಯದ ಮೇಲೆ ಪ್ರಬಂಧವೊಂದನ್ನು ಬರೆಯಿರಿ. (ಉತ್ತರ ಒಂದೂವರೆ ಪುಟಕ್ಕೆ ಮೀರದಂತಿರಲಿ) (8)

ಅಥವಾ

ವರ್ತಮಾನ ಸಮಾಜದ ಸ್ಥಿತಿಗತಿಗಳು ‘ಬಕ’ ನಾಟಕದಲ್ಲಿ ಪ್ರತಿಫಲಿತವಾಗಿದೆಯೇ? ನಿಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿ ಬರೆಯಿರಿ.

# Answer Key/Value Points

| Q.No | Answer Key/Value Points | score | Toatal |
|---|---|---|---|
| 1 | ಪ್ರವಾಸ ಕಥನ | **1** | **1** |
| 2 | ಸಿಂಗರ | **1** | **1** |
| 3 | ಅಮಲೇಶ್ವರ ಲಿಂಗ | **1** | **1** |
| 4 | ನೋಟೀಸು | **1** | **1** |
| 5 | ರಸ + ಅನುಭವ | **1** | **1** |
| 6 | ಉಪಮಾಲಂಕಾರ | **1** | **1** |
| 7 | ಸುಳ್ಳು | **1** | **1** |
| 8 | ಪ್ರಾವಿಣ್ಯ | **1** | **1** |
| 9 | ಜನ್ನ – ಕಂದ – ಧೀರರಕಟ ಕುಮಾರರ್ | **1** | **1** |
| 10 | ಬಸವಣ್ಣ – ವಚನ – ನೆರೆಮನೆಯ ದು:ಖಕ್ಕೆ ಅಳುವವರ ಮೆಚ್ಚ | **1** | **1** |
| 11 | ಕುಮಾರವ್ಯಾಸ – ಷಟ್ಪದಿ – ಭೇದದಲಿ ಹೊಕ್ಕಿರಿದನೋ | **1** | **1** |
| 12 | ದುರ್ಗಸಿಂಹ – ಚಂಪೂ – ತಸ್ಕರಸ್ಯಾನೃತಬಲಂ | **1** | **1** |
| 13 | ನಮ್ಮ ಹೊಲದಲ್ಲಿ ಇಂತಹದೆಷ್ಟೋ ನೋಡಿರುವೆನು. ಉಳುತ್ತಾ ಹೋದಾಗ ನೇಗಿಲಿನ ಕುಳಕ್ಕೆ ಸಿಲುಕಿ ಮೇಲೆ ಬರುವುದು ಎಂದು ತಾತ್ಸಾರ ಭಾವದಿಂದ ನುಡಿದನು. | | **2** |
| 14 | ಜೂಜು ಒಂದು ವ್ಯಸನ. ಈ ವ್ಯಸನಕ್ಕೆ ಬಲಿಯಾಗಿ ಧರ್ಮರಾಯನು ರಾಜ್ಯ ಕೋಶಾದಿಗಳನ್ನು ಕಳಕೊಂಡನು. ನಳ ಮಹಾರಾಜನು ಕಾಡಿನ ದಾರಿ ಹಿಡಿದನು. ಆದುದರಿಂದ ಈ ರೀತಿಯ ವ್ಯಸನಗಳಿಗೆ ಬಲಿಯಾಗದಿರು ಎಂದು ಕಂದನಿಗೆ ತಾಯಿಯ ಉಪದೇಶ. | 2 | **2** |
| 15 | ಬಸವ ಇವತ್ತು ನಾವೆಲ್ಲ ಊರಿಗೆ ಹೋಗುತ್ತಿದ್ದೇವೆ. ನೀನೊಬ್ಬನೆ ಗೌಡರ ಮನೆಯಲ್ಲಿರು. ಅವರಿಗೆ ಹೇಳುತ್ತೇನೆ. | 2 | **2** |
| 16 | ಬೆಕ್ಕೊಂದು ಬಂದು ಬೆಣ್ಣೆಯನ್ನು ತಿನ್ನುತ್ತಿತ್ತು. ಅದನ್ನು ನಾವಿಬ್ಬರು ವರ್ಣಿಸಿ ಹೇಳಿದೆವು. ಆದರೂ ಯಾರ ಕಿವಿಯ ಮೇಲೂ ಅದು ಬೀಳದೆ ನಮಗೆ ತಕ್ಕ ಶಾಸ್ತಿಯಾಯಿತು. | 2 | **2** |
| 17 | ಕೊಳವೆಬಾವಿಯ ಬಗೆಗಿನ ಖಾದ್ರಿ ಬ್ಯಾರಿಯ ತಿರಸ್ಕಾರ.<br>ಪ್ರಕೃತಿಯ ಮೇಲಿನ ದೌರ್ಜನ್ಯಗಳ ವಿರುದ್ಧವಾದ ಮನೋಭಾವ.<br>ಪರಿಸರ ಸ್ನೇಹಿ ಸುರಂಗದ ನಿರ್ಮಾಣಕ್ಕೆ ಒಲವು | 1<br>1<br>1 | **3** |
| 18 | ಚೈತ್ರ ಪುರುಷನ ಆಗಮನ, ಮರಗಳಲ್ಲಿ ಚಿಗುರು, ಉಲಿಯುವ ಪಿಕ, ಶುಕ, ಪಕ್ಷಿ ಸಂಕುಲದ ನಿನದ – ದುಂಬಿ ಹಿಂಡು ವುಗಳ ವಿವರಣೆ | 3 | **3** |
| 19 | ಬೆಟ್ಟದ ತಪ್ಪಲಲ್ಲಿ ಬೆಳೆಯುವ ಹುಲ್ಲು – ಹಿರಿಯರ ಆಶಯ – ವಿಧೇಯತೆ. ಮನೆಯ ಒಳಗೂ ಹೊರಗೂ ಎಲ್ಲರೊಳಗೊಂದಾಗಿ ಬೆರೆತು ಬಾಳುವುದು | 3 | **3** |
| 20 | ಹಸಿವಿನ ಸಮಸ್ಯೆಯ ಚಿತ್ರಣ – ಕ್ಥೆಯಲ್ಲಿ ಮೂಡಿಬಂದ ರೀತಿ – ವ್ಯಾಖ್ಯಾನ | 3 | **3** |
| 21 | ಧರ್ಮಬುದ್ಧಿಯ ಗುಣ ಸ್ವಭಾವದ ನಿರೂಪಣೆ – ದುಷ್ಟಬುದ್ಧಿಯ ಸ್ವಭಾವದ ನಿರೂಪಣೆ | 3 | **3** |
| 22 | ಕರ್ಣ, ದುಶ್ಯಾಸನ, ಕಂಸ ಮೊದಲಾದ ಪ್ರತಿನಾಯಕ ಪಾತ್ರಗಳನ್ನು ನಿರ್ವಹಿಸಿದ ರೀತಿ.<br>ನಾಯಕ ಸಂವಾದಿಯಾದ ಪ್ರಾಧಾನ್ಯವನ್ನು ಒದಗಿಸಿಕೊಟ್ಟದ್ದು – ಇವೇ ಮೊದಲಾದವುಗಳ ವಿವರಣೆ | 3 | **3** |
| 23 | ಕವಿತೆಯಲ್ಲಿ ಅಭಿವ್ಯಕ್ತವಾದ ವರ್ಣನೆಯ ನಿರೂಪಣೆಗೆ<br>ಆಸ್ವಾದನೆಯ ಅಭಿವ್ಯಕ್ತಿ<br>ಪ್ರಾಸ ವಿಶೇಗಳನ್ನು ಗುರುತಿಸಿದ್ದಕ್ಕೆ | 2<br>1<br>1 | **4** |

| | | | |
|---|---|---|---|
| 24 | ಪಾಡ್ದನ – ತೋತ್ತಂ ಪಾಟ್,<br>ಗುಳಿಗ, ರಕ್ತೇಶ್ವರಿ ಮೊದಲಾದ ಭೂತ, ತೆಯ್ಯಂಗಳ ಸಾಮ್ಯತೆ<br>ಮುಖವರ್ಣಿಕೆಯಲ್ಲಿನ ವ್ಯತ್ಯಾಸ, ದೈವಗಳು ಧರಿಸುವ ಮೊಗಗಳು ತೈಯ್ಯಂನಲ್ಲಿ ಇಲ್ಲ | <br>2<br>2 | **4** |
| 25 | ಭಾಷಣದ ಸ್ವರೂಪ<br>ಮನುಷ್ಯ ಪ್ರವೃತ್ತಿ – ಕೋಪದಿಂದಾಗುವ ದುಷ್ಪರಿಣಾಮ<br>ಬಸವಣ್ಣನವರ ವಿವೇಚನೆ | 1<br>2<br>1 | **4** |
| 26 | ಮನವಿ ಪತ್ರದ ಚೌಕಟ್ಟು,<br>ವಿಷಯದ ಸಮಗ್ರತೆ,<br>ನಿರೂಪಣ ವೀಧಾನ | 1<br>2<br>1 | **4** |
| 27 | ಪತ್ರದ ವಿನ್ಯಾಸ<br>ಪ್ರವಾಸದ ಅನುಭವಗಳ ವರ್ಣನಾತ್ಮಕ ಅಭಿವ್ಯಕ್ತಿ<br>ನಿರೂಪಣಾ ವಿಧಾನ | 1<br>2<br>1 | **4** |
| 28 | ಕಾವ್ಯಭಾಗದ ಸೌಂದರ್ಯವನ್ನು ತಿಳಿಸಿದ್ದರೆ<br>ಕೃಷ್ಣನ ಭೇದೋಪಾಯ, ಜನ್ಮ ವೃತ್ತಾಂತವನ್ನು ತಿಳಿದ ಕರ್ಣನ ಉಭಯ ಸಂಕಟ – ಇವುಗಳ ವಿವರಣೆ<br>ನಿರೂಪಣೆ<br>ಅಥವಾ<br>ಕಾವ್ಯಭಾಗದ ಸಂದರ್ಭವನ್ನು ತಿಳಿಸಿದ್ದರೆ<br>ಉಭಯ ಸಂಕಟಕ್ಕೊಳಗಾದ ಕರ್ಣನ ಮನಸ್ಥಿತಿ<br>ಕರ್ಣನ ಪ್ರತಿಜ್ಞೆ – ಸ್ವಾಮಿನಿಷ್ಠೆಯ ವಿವೇಚನೆ<br>ನಿರೂಪಣಾ ವಿಧಾನ | 1<br>4<br>1<br><br>1<br>2<br>2<br>1 | **6** |
| 29 | ಕಾವ್ಯಭಾಗದ ಸಂದರ್ಭ<br>ಮಾರಿದತ್ತನ ಆಜ್ಞೆ – ಚಂಡಕರ್ಮನು ಬಾಲಕರನ್ನು ಸೆರೆ ಹಿಡಿದುದು – ಮಾರಿಗುಡಿಯಲ್ಲಿ ಹೆದರದೆ ನಿಂತು ರಾಜನಿಗೆ ಒಳಿತನ್ನು ನುಡಿದ ಅಭಯರುಚಿ – ಮಾರಿದತ್ತನ ಆಶ್ಚರ್ಯ<br>ನಿರೂಪಣ ವಿಧಾನ<br>ಅಥವಾ<br>ಕಾವ್ಯ ಭಾಗದ ಸಂದರ್ಭವನ್ನು ತಿಳಿಸಿದ್ದರೆ<br>ನಿಶ್ಚಿಂತೆಯಿಂದ ಮಾರಿಗುಡಿಯನ್ನು ಪ್ರವೇಶಿಸಿದ ಅಭಯರುಚಿ ಅಭಯಮತಿ – ನಿರ್ಮಲ ಧರ್ಮದಿಂ ಪಾಲಿಸು ಧರೆಯಂ ಎಂದು ಹರಸಿದುದು – ಮಾರಿದತ್ತನಿಗೆ ಆದ ಆಶ್ಚರ್ಯ ಇವುಗಳನ್ನು ನಿರೂಪಿಸಿದ್ದರೆ.<br>ಭಾಷೆ ಮತ್ತು ಶೈಲಿಗೆ | 2<br>4<br>2<br><br>2<br>4<br>2 | **8** |
| 30 | ಪೀಠಿಕೆ ಆರಂಭ ಇತ್ಯಾದಿಗಳನ್ನು ಒಳಗೊಂಡಿದ್ದರೆ<br>ಭ್ರಷ್ಟಾಚಾರದ ಸ್ವರೂಪ, ಹದಗೆಟ್ಟ ಸಮಾಜ, ಜನಸಾಮಾನ್ಯರ ಪಾಡು ಮೊದಲಾದವುಗಳ ವಿವರಣೆ<br>ನಿರೂಪಣ ವಿಧಾನ<br>ಅಥವಾ<br>ಬಕ ನಾಟಕದಲ್ಲಿ ಬಂದಿರುವ ವರ್ತಮಾನ ಸ್ಥಿತಗತಿಗಳನ್ನು ವಿವೇಚಿಸದ್ದರೆ<br>ಅಭಿಪ್ರಾಯಗಳನ್ನು ಸಮರ್ಥಿಸಿದ್ದರೆ<br>ನಿರೂಪಣಾ ವಿಧಾನ | 2<br>4<br>2<br><br>4<br>2<br>2 | **8** |
| | | Total | **80** |
| | | | |